# ನಾಚಿಕೆ ಪಡಬೇಡ ಮನದೊಳು ಯೋಚಿಸಿ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The wordings (given without highlights) are as per the book in Ref. 1 above. The wordings in the book in Ref. 2 & Ref. 3 are matching fully and are marked in yellow highlights. The singer has followed Ref. 2 & Ref. 3.

| | |
|---|---|
| ರಾಗ ಸುರುಟಿ ಆದಿ ತಾಳ | ರಾಗ ಕೇದಾರ ಗೌಳ ಆದಿ ತಾಳ |
| | |
| ನಾಚಿಕೆಗೊಳಬೇಡ ಮನದಲಿ | ನಾಚಿಕೆಪಡಬೇಡ ಮನದೊಳು |
| ಯೋಚಿಸಿ ಕೆಡಬೇಡ \|\| ಪ \|\| | ಯೋಚಿಸಿ ಕೆಡಬೇಡ |
| | |
| ನೀಚವೇನೊ ನಮ್ಮಚ್ಯುತನೋಲಗ | ನಿಚ್ಚ ನೆನೆಯೊ ನಮ್ಮಚ್ಯುತ ನಾಮವ |
| ಮೆಚ್ಚಿ ಕೊಟ್ಟಿದೆ ನಿನಗೆ ಹೆಚ್ಚಿನ ಪದವಿಯ \|\| ಅಪ \|\| | ಮೆಚ್ಚಿ ಕೊಟ್ಟರೆ ಅಚ್ಯುತ ಪದವೀವ |
| | |
| ಹರಿ ಹರಿ ಎಂದೊದರೊ ಹತ್ತಿದ | ಹರಿ ಹರಿ ಎಂದೊದರೊ ಹತ್ತಿದ |
| ದುರಿತಗಳಿಗೆ ಬೆದರೊ | ದುರಿತಗಳಿಗೆ ಬೆದರೊ |
| ನೀರಜಾಕ್ಷ ನಿರ್ಜರ ಪತಿ ಹರಿಯೆಂದು | ವಾರಿಜಾಕ್ಷನ ವೈಕುಂಠ ಪುರವ |
| ಚೀರಿ ಹಾರಿ ಭೋರಿಡುತಲಿ ಕುಣಿಯೊ \|\| 1 \|\| | ಸೇರಿ ಸೇರಿ ನೀ ಕುಣಿ ಕುಣಿದಾಡೊ |
| | |
| ಯಾರ ಗೋಡವೆಯೆನೊ ನರಕದ | ಆರಗೊಡವೆಯೆನೊ ನರಕದ |
| ದಾರಿ ತಪ್ಪಿಪರೇನೊ | ದಾರಿ ತಪ್ಪಿಸುವರೆ |
| ಸಾರಿ ಸಾರಿ ಸರ್ವೇಶನ ನಾಮವ | ನೀರಜಾಕ್ಷ ನಮ್ಮ ನಿರ್ಜರ ಪತಿಯಲಿ |

| | |
|---|---|
| ಬೀರಿ ಬೀರಿ ಕೈ ಮುಗಿದು ಕೊಂಡಾಡೊ || 2 || | ಸೇರಿ ಸೇರಿಸಿ ಮನ ನಲಿ ನಲಿದಾಡೊ |
| | |
| ಭಕ್ತ ಜನರ ಕೂಡೊ ಭವ ಭಯ | ಭಕ್ತ ಜನರ ಕೂಡೊ ಭವ ಭಯ |
| ಬತ್ತಿ ಪೋಪುದು ನೋಡೊ | ಬತ್ತಿ ಪೋಪುದು ನೋಡೊ |
| ಮುಕ್ತಿದಾಯಕ ಶ್ರೀ ಪುರಂದರ ವಿಠಲನ | ಮುಕ್ತಿದಾಯಕ ಶ್ರೀ ಪುರಂದರ ವಿಠಲನ |
| ಭಕ್ತಿಯಿಂದ ನೀ ಕುಣಿಯುತ ಪಾಡೋ || 3 || | ಭಕ್ತಿಯಿಂದ ನೀ ಹಾಡಿ ಕೊಂಡಾಡೊ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಹೆಚ್ಚಿನ ಪದವಿ** – ಮನುಷ್ಯ ಜನ್ಮ; ಅದೇನು ಕೀಳಾದುದಲ್ಲ; ಪರಮಾತ್ಮನ ಅನುಗ್ರಹದಿಂದಲೇ ಬಂದದ್ದು; ಸಾಧನೆಗೆ ಅನುಕೂಲವಾದದ್ದು.

**ಅಚ್ಯುತ ಪದ** = ಮೋಕ್ಷ

**ನಿರ್ಜರು** = ದೇವತೆಗಳು

**ದುರಿತ** = ಪಾಪ, ಕಷ್ಟ, ಅಮಂಗಳ, ಕೇಡು

**Classification:** Keerthane
**Ankita:** sri purandara vittala
**Location:** NA
**Category:** bhakti, nama smarane
**Group Words:** nachike, achyuta, Krishna, papa, naraka, pati, bhava, mukti
**Pravachana:** NA
**Explanation:** NA